# ಮೆಣಸಿನಕಾಯಿ ಮುಟುರು ರೋಗ ನಿರ್ವಹಿಸಿ ಯಶಸ್ವಿಯಾದ ಸುರೇಶ್

● ಡಾ. ಎಂ.ಸಿ.ಮಲ್ಲಿಕಾರ್ಜುನ





ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಮಾಸೂರು ಗ್ರಾಮದ ರೈತ ಸುರೇಶ್ ದಶರಥರಾವ್ ನಲವಡಿಯವರು ತಮ್ಮ 9 ಎಕರೆ ಜಮೀನಿಗೆ ಮಳೆಗಾಲದಲ್ಲಿ ಮದಗದ ಕೆರೆಯ ನೀರನ್ನು ಸಂಪೂರ್ಣವಾಗಿ ಬಳಸಿಕೊಂಡು ಭತ್ತ, ಶೇಂಗಾ, ಗೋವಿನ ಜೋಳ ಬೆಳೆ ಬೆಳೆಯುತ್ತಾರೆ. ಬೇಸಿಗೆಯಲ್ಲಿ ನೀರನ್ನು ಬೋರ್‌ವೆಲ್‌ನ ಸ್ಪ್ರಿಂಕ್ಲರ್ ಮೂಲಕ ಬಳಸಿ ಮೆಣಸಿನಕಾಯಿ, ಶೇಂಗಾ, ಗೋವಿನ ಜೋಳ, ಹೈಬ್ರಿಡ್ ಜೋಳ, ಉದ್ದು, ಅಲಸಂದೆ, ಹೆಸರು, ಮಿಶ್ರಬೆಳೆಯಾಗಿ ಶೇಂಗಾ, ಎಳ್ಳು ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇವರು 1 ಎಕರೆ 9 ಗುಂಟೆಯಲ್ಲಿ ಅಡಿಕೆ ತೋಟ ಮಾಡಿದ್ದು, ಸುತ್ತಲು ಸಾಗುವಾನಿ ಮರಗಳನ್ನು ಬೆಳೆಸಿದ್ದಾರೆ. 40 ಅಫೋಸ್, ರತ್ನಗಿರಿ ಮಾವಿನ ಮರಗಳನ್ನು ಹಾಗೂ 20 ತೆಂಗಿನ ಮರಗಳನ್ನು ಬೆಳಸಿದ್ದಾರೆ. ಈ ಎಲ್ಲಾ ಬೆಳೆಗಳಿಂದ 2015ನೇ ಸಾಲಿನಲ್ಲಿ 13 ಲಕ್ಷಗಳನ್ನು ಗಳಿಸಿದ್ದಾರೆ.

**ಬೋರ್‌ವೆಲ್ ನೀರು ಬಳಸಿ ಬೇಸಿಗೆಯಲ್ಲಿ ಬೆಳೆಯುತ್ತಿರುವ ಬೆಳೆಗಳು**

ಶೇಂಗಾ–5ಎಕರೆ, ಗೋವಿನಜೋಳ–2ಎಕರೆ, ಮೆಣಸಿನಕಾಯಿ–3.5 ಎಕರೆ, ಹೈಬ್ರಿಡ್‌ಜೋಳ–1 ಎಕರೆ, ಅಕ್ಕಡಿಯಲ್ಲಿ ಉದ್ದು, ಅಲಸಂದೆ, ಹೆಸರು.

**ಮಳೆಗಾಲದಲ್ಲಿ ಮದಗದ ಕೆರೆಯ ನೀರನ್ನು ಆಶ್ರಯಿಸಿ ಬೆಳೆಯುತ್ತಿರುವ ಬೆಳೆಗಳು**

ಭತ್ತ – 2 ಎಕರೆ, ಶೇಂಗಾ – 2 ಎಕರೆ, ಗೋವಿನ ಜೋಳ – 1 ಎಕರೆ, ಬೀನ್ಸ್ – 20 ಗುಂಟೆ

ಸುರೇಶ್ ನಲವಡಿಯವರು ಹನುಮನಮಟ್ಟಿಯ ಕೃಷಿ ತಜ್ಞರಾದ ಡಾ.ಎಸ್. ಟಿ. ಪ್ರಭು, ಡಾ. ಮಲ್ಲಿಕಾರ್ಜುನಪ್ಪಗೌಡ, ಡಾ. ಗಣಪತಿ ಮುಂತಾದವರ ನೆರವನ್ನು ಎಂದಿಗೂ ಮರೆಯುವುದಿಲ್ಲ ಎನ್ನುತ್ತಾರೆ. ಮೆಣಸಿಕಾಯಿ ನರಡಿ ರೋಗವನ್ನು ನಿಯಂತ್ರಿಸಲು ಈ ತಜ್ಞರ ಸಲಹೆಯಂತೆ ಔಷಧಿ ಸಿಂಪರಣೆ ಮುಂತಾದ ಕ್ರಮಗಳನ್ನು ಅನುಸರಿಸಿರುವುದರಿಂದ ಇಂದು ಉತ್ತಮ ಆರೋಗ್ಯಕರ ಮೆಣಿಸಿನ ಗಿಡಗಳು ಜಮೀನಿನಲ್ಲಿ ನಳನಳಿಸುತ್ತಿವೆ.

ಈ ಭಾಗದ ಮೆಣಸಿನ ಬೆಳೆಗೆ ಮುಟುರು ರೋಗ ತಗುಲಿ (ನರಡಿ ರೋಗ) ಸಾಕಷ್ಟು ಮಂದಿ ರೈತರು ನಷ್ಟ ಅನುಭವಿಸಿರುವುದು ಕಂಡು ಬರುತ್ತದೆ.



ಆದರೆ ವೈಜ್ಞಾನಿಕ ವಿಧಾನವನ್ನು ಅನುಸರಿಸಿ ಕಾಲಕಾಲಕ್ಕೆ ಔಷಧಿ ಸಿಂಪಡಿಸಿ ಮುಟುರು ರೋಗವನ್ನು ನಿಯಂತ್ರಿಸಬಹುದು ಎನ್ನುತ್ತಾರೆ. ಮೆಣಸಿನ ಬೆಳೆಗೆ ಪ್ಲಾಸ್ಟಿಕ್ ಹೊದಿಕೆ ಬಳಸಿ ಹಾಗೂ ಕೃಷಿ ತಜ್ಞರ ಸಲಹೆಯಂತೆ ಔಷಧಿ ಸಿಂಪಡಿಸಿ ರೋಗವನ್ನು ನಿಯಂತ್ರಿಸುವಲ್ಲಿ ಸುರೇಶ್ ನಲವಡಿಯವರು ಯಶಸ್ವಿಯಾಗಿದ್ದಾರೆ.

ಈ ವರ್ಷ ಬೇಸಿಗೆಯಲ್ಲಿ ತಮ್ಮ ಮೂರುವರೆ ಎಕರೆ  ಜಮೀನಿನಲ್ಲಿ ಮೆಣಸಿನಕಾಯಿ ಬೆಳೆದು 13.64 ಲಕ್ಷ ರೂ.ಗಳನ್ನು ಪಡೆದಿದ್ದಾರೆ ಹಾಗೂ ಇನ್ನೂ 5 ಲಕ್ಷ ರೂ.ಗಳ ಆದಾಯದ ನಿರೀಕ್ಷೆಯಲ್ಲಿದ್ದಾರೆ. ಸ್ವತಃ ಇವರೇ ಮೆಣಸಿನಕಾಯಿಯನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದರಿಂದ ಹೆಚ್ಚಿನ ಆದಾಯವನ್ನು ಪಡೆಯಲು ಸಹಕಾರಿಯಾಗಿದೆ. ಈ ಮೊದಲು ಕೊಳವೆ ಬಾವಿ ನೀರನ್ನು ಆಶ್ರಯಿಸಿ 9 ವರ್ಷದವರೆಗೆ ಬಾಳೆಯನ್ನು ಬೆಳೆದಿದ್ದಾರೆ. ಹಾಗೆಯೇ ಈರುಳ್ಳಿ ಬೆಳೆಯನ್ನು ಬೆಳೆದು ಅದರಲ್ಲೂ ಒಳ್ಳೆಯ ಲಾಭವನ್ನು ಗಳಿಸಿರುತ್ತಾರೆ.

ಕೆಲವರಿಗೆ ಹಣಕಾಸಿನ ಕೊರತೆ, ಕೆಲವರಿಗೆ ನೀರಿನ ಕೊರತೆ ಮತ್ತೆ ಕೆಲವರಿಗೆ ದುಡಿಯುವುದಕ್ಕೆ ಜಮೀನೆ ಇರುವುದಿಲ್ಲ ಇನ್ನೂ ಕೆಲವರಿಗೆ ಎಲ್ಲವೂ ಇದ್ದು ಸರಿಯಾದ ವೈಜ್ಞಾನಿಕ ಕ್ರಮದಲ್ಲಿ ಬೇಸಾಯ ಮಾಡದೆ ಉಡಾಫೆತನ ತೋರಿ ತಾವು ಬೆಳೆದ ಬೆಳೆಗಳಲ್ಲಿ ಸಾಲ ಮಾಡಿ ನಷ್ಟ ಮಾಡಿಕೊಳ್ಳುತ್ತಾರೆ. ಕೃಷಿ ವಿಜ್ಞಾನಿಗಳನ್ನು ಭೇಟಿ ಮಾಡಿ ಸಲಹೆ ಪಡೆದರೆ ನಮ್ಮ ರೈತರು ಆಡಿಕೊಳ್ಳುತ್ತಾರೆ. ಇದು ಸರಿಯಲ್ಲ. ನನ್ನ ವೈಯಕ್ತಿಕ ಅನಿಸಿಕೆ ಎಂದರೆ ಕೃಷಿ ವಿಜ್ಞಾನಿಗಳು ದೇವರಿದ್ದಂತೆ ಅವರಿಂದ ಸರಿಯಾದ ಮಾಹಿತಿ ಪಡೆದುಕೊಂಡು ಯಾವ ಕಾಲಕ್ಕೆ ಯಾವ ಬೆಳೆ, ಯಾವ ಔಷಧಿ ಸಿಂಪಡಿಸಬೇಕು, ಮಣ್ಣಿನ ಪರೀಕ್ಷೆ ಮುಂತಾದ ಕ್ರಮವನ್ನು ಅನುಸರಿಸಬೇಕು. ನನ್ನ ಕಷ್ಟದ ಸಮಯದಲ್ಲಿ ನನ್ನ ಕೈಹಿಡಿದವರು ಕೃಷಿ ತಜ್ಞರು. ಅದರಂತೆ ಕೃಷಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಯವರು ನಮಗೆ ಅನುಕೂಲ ಮಾಡಿಕೊಟ್ಟಿದ್ದಾರೆ ಇವರನ್ನೆಂದೂ ನಾನು ಮರೆಯುವಂತಿಲ್ಲ ಎನ್ನುತ್ತಾರೆ ನಲವಡಿಯವರು.

ನಾನು ರೈತರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ ಹೊಸ ತಳಿಗಳ ಬೆಳೆಗಳನ್ನು ಬೆಳೆಯಿರಿ, ಕೃಷಿ ಕೇಂದ್ರಗಳಿಗೆ, ಕೃಷಿ ತಜ್ಞರ ಭೇಟಿ ಮಾಡಿ ಚರ್ಚಿಸಿ ಸಲಹೆ ಪಡೆಯಿರಿ.

ಈ ಬಾರಿ ಮುಟುರು ರೋಗದಿಂದ ಮೆಣಸಿನಕಾಯಿ ಇಳುವರಿ ಅತ್ಯಂತ ಕಡಿಮೆ. ಆದರೆ ಸುರೇಶ್ ಅವರ ಹೊಲದಲ್ಲಿ ಉತ್ತಮ ಬೆಳೆ ನಳನಳಿಸುತ್ತಿದೆ. ಬೆಲೆ ಚೆನ್ನಾಗಿ ಇರುವುದರಿಂದ ಉತ್ತಮ ಆದಾಯ ಪಡೆದಿದ್ದಾರೆ. ಕೇವಲ 3 ಎಕರೆ ಜಮೀನಿನಲ್ಲಿ 20 ಲಕ್ಷ ಆದಾಯ ಬರುತ್ತಿದೆ. ಇದಕ್ಕೆ ಕಾರಣ ಏನು ಗೊತ್ತೆ? ಇವರು ವಿಜ್ಞಾನಿಗಳೊಡಗಿನ ನಿಕಟ ಸಂಪರ್ಕವಂತೆ. ಹೆಚ್ಚಿನ ವಿವರಗಳಿಗೆ ಸುರೇಶ್ ಅವರ ಜೊತೆ ಚರ್ಚಿಸಿ. ಸಂ.



**ಸಂಪರ್ಕ ವಿಳಾಸ:**
**ಶ್ರೀ ಸುರೇಶ್ ದಶರಥರಾವ್ ನಲವಡಿ**
**ಮಾಸೂರು ಗ್ರಾಮ, ಹಿರೇಕೆರೂರು ತಾಲ್ಲೂಕ್**
**ಹಾವೇರಿ ಜಿಲ್ಲೆ, ದೂರವಾಣಿ: 9880993872**

ಚಿತ್ರಗಳು: ಎಸ್.ಟಿ. ಪ್ರಭು